**Re.No. D. 221**

भारत का राजपत्र
The Gazette of India

# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

**भाग IX** **अनुभाग 1**
**PART IX** **SECTION 1**
ಭಾಗ **IX** ವಿಭಾಗ **1**

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | | |
|---|---|---|---|
| सं 1<br>No.1<br>ಸಂಖ್ಯೆ 1 | नई दिल्ली, सोमवार, मार्च 29, 1993<br>New Delhi, Monday, March 29, 1993<br>ನವದೆಹಲಿ, ಸೋಮವಾರ, ಮಾರ್ಚ್ 29, 1993 | चैत्र 09, 1915 (शक)<br>Chaitra 06, 1915 (saka)<br>ಚೈತ್ರ 09, 1915 (ಶಕ) | खंड.14<br>Vol. 14<br>ಸಂಪುಟ. 14 |


**Ministry of Law, Justice & Company Affairs**
(Legislative Department)
New Delhi, 29th March, 1993

**ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 29ನೇ ಮಾರ್ಚ್, 1993**

The Translation in Kannada of the following Acts, namely:- (1) The Payment of Wages Act, 1936 (2) The Contempt of Courts Act, 1971 (3) The Special Marriage Act, 1954 (4) The Cattle Trespass Act, 1871 (5) The Minimum Wages Act, 1948 (6) The International Airports Authority Act, 1971 (7) The Scheduled Castes and the Scheduled Tribes (Prevention of Atrocities) Act, 1989 (8) The Registration Act, 1908 (9) The Police Act, 1861 (10) The Legal Services Authorities Act, 1987 (11) The Environment (Protection) Act, 1986 (12) The Ancient Monuments and Archaeological Sites and Remains Act, 1958 (13) The Explosives Act, 1884 (14) The Equal Remuneration Act, 1976 (15) The Probation of Offenders Act, 1958 (16) The Central Reserve Police Force Act, 1949 (17) The Conservation of foreign Exchange And Prevention of Smuggling Activities Act, 1974-are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಮಜೂರಿ ಸಂದಾಯ ಅಧಿನಿಯಮ, 1936 (2) ನ್ಯಾಯಾಲಯ ನಿಂದನೆ ಅಧಿನಿಯಮ, 1971 (3) ವಿಶೇಷ ವಿವಾಹ ಅಧಿನಿಯಮ, 1954 (4) ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ, 1871 (5) ಕನಿಷ್ಠ ಮಜೂರಿ ಅಧಿನಿಯಮ, 1948 (6) ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1971 (7) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 (8) ನೋಂದಣಿ ಅಧಿನಿಯಮ, 1908 (9) ಪೊಲೀಸು ಅಧಿನಿಯಮ, 1861 (10) ಕಾನೂನು ಸೇವಾ ಪ್ರಾಧಿಕಾರ ಅಧಿನಿಯಮ, 1987 (11) ಪರಿಸರ (ಸಂರಕ್ಷಣೆ) ಅಧಿನಿಯಮ, 1986 (12) ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷ ಅಧಿನಿಯಮ, 1958 (13) ಸ್ಫೋಟಕ ಅಧಿನಿಯಮ, 1884 (14) ಸಮಾನ ಪರಿಶ್ರಮ ಧನ ಅಧಿನಿಯಮ, 1976 (15) ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (16) ಕೇಂದ್ರ ರಿಸರ್ವ್ ಪೊಲೀಸು ದಳ ಅಧಿನಿಯಮ, 1949 (17) ವಿದೇಶೀ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ ಅಧಿನಿಯಮ, 1974– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ ಅಧಿನಿಯಮ, 1974

## (1974ರ ಸಂಖ್ಯೆ 52)

[13ನೇ ಡಿಸೆಂಬರ್, 1974.]

ವಿದೇಶಿ ವಿನಿಮಯದ ಸಂರಕ್ಷಣೆ ಮತ್ತು ಹೆಚ್ಚಳ ಮತ್ತು ಕಳ್ಳಸಾಗಣೆ ಚಟುವಟಿಕೆಗಳನ್ನು ಪ್ರತಿಬಂಧಿಸುವ ಉದ್ದೇಶಗಳಿಗಾಗಿ ಕೆಲವು ಸಂದರ್ಭಗಳಲ್ಲಿ ಪ್ರತಿಬಂಧಕ ಸ್ಥಾನಬದ್ಧತೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ವಿದೇಶಿ ವಿನಿಮಯದ ವಿನಿಯಮಗಳ ಉಲ್ಲಂಘನೆಗಳು ಮತ್ತು ಕಳ್ಳಸಾಗಣೆ ಚಟುವಟಿಕೆಗಳು ರಾಷ್ಟ್ರೀಯ ಅರ್ಥವ್ಯವಸ್ಥೆಯ ಮೇಲೆ ಹೆಚ್ಚು ಹೆಚ್ಚಾಗಿ ಅಪಾಯಕರ ಪರಿಣಾಮವನ್ನು ಬೀರುತ್ತಿರುವುದರಿಂದ ಮತ್ತು ಅದರಿಂದಾಗಿ ರಾಜ್ಯದ ಭದ್ರತೆಯ ಮೇಲೆ ಗಂಭೀರ ಪ್ರತಿಕೂಲ ಪರಿಣಾಮವುಂಟಾಗುತ್ತಿರುವುದರಿಂದ;

ಮತ್ತು ಅಂಥ ಚಟುವಟಿಕೆಗಳು ಅಥವಾ ಉಲ್ಲಂಘನೆಗಳು ಯಾರಿಂದ ಮತ್ತು ಯಾವ ರೀತಿಯಲ್ಲಿ ಸಂಘಟಿತವಾಗುತ್ತಿವೆಯೋ ಮತ್ತು ನಡೆಸಲಾಗುತ್ತಿದೆಯೋ ಆ ವ್ಯಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಕಳ್ಳಸಾಗಣಿಕೆ ಚಟುವಟಿಕೆಗಳಿಗೆ ಅತ್ಯಂತ ಬೇಧ್ಯವಾಗಿರುವಂಥ ಕೆಲವು ಪ್ರದೇಶಗಳಲ್ಲಿ, ಗಣನೀಯ ಪ್ರಮಾಣದ ಕಳ್ಳಸಾಗಣೆ ಚಟುವಟಿಕೆಗಳನ್ನು ಮುಚ್ಚುಮರೆಯಿಂದ ಸಂಘಟಿಸಲಾಗುತ್ತಿದೆ ಮತ್ತು ನಡೆಸಲಾಗುತ್ತಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಅಂಥ ಚಟುವಟಿಕೆಗಳು ಮತ್ತು ಉಲ್ಲಂಘನೆಗಳನ್ನು ಪರಿಣಾಮಕಾರಿಯಾಗಿ ಪ್ರತಿಬಂಧಿಸುವುದಕ್ಕಾಗಿ, ಅದರೊಂದಿಗೆ ಯಾವುದೇ ರೀತಿಯಲ್ಲಿ ಸಂಬಂಧಪಟ್ಟ ವ್ಯಕ್ತಿಗಳನ್ನು ಸ್ಥಾನಬದ್ಧತೆಗಾಗಿ ಉಪಬಂಧ ಕಲ್ಪಿಸುವುದು ಅವಶ್ಯವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೈದನೇ ವರ್ಷದಲ್ಲಿ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ವಿದೇಶಿ ವಿನಿಯಮ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ ಅಧಿನಿಯಮ, 1974 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ (1974ರ ಡಿಸೆಂಬರ್ ಇಪ್ಪತ್ತನೇ ದಿವಸಕ್ಕಿಂತ ತರುವಾಯದ್ದಲ್ಲದ ದಿನಾಂಕವಾಗಿರುವ) ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಮುಚಿತ ಸರ್ಕಾರ" ಎಂದರೆ, ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಧಿಕಾರಿ ಮಾಡಿದ ಸ್ಥಾನಬದ್ಧತಾ ಆದೇಶ ಅಥವಾ ಅಂಥ ಆದೇಶದ ಮೇರೆಗೆ ಸ್ಥಾನಬದ್ಧತೆಯಲ್ಲಿಟ್ಟ ವ್ಯಕ್ತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದ ಅಧಿಕಾರಿಯು ಮಾಡಿದ ಸ್ಥಾನಬದ್ಧತಾ ಆದೇಶ ಅಥವಾ ಅಂಥ ಆದೇಶದ ಮೇರೆಗೆ ಸ್ಥಾನಬದ್ಧತೆಯಲ್ಲಿಟ್ಟ ವ್ಯಕ್ತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ;

(ಬಿ) "ಸ್ಥಾನಬದ್ಧತಾ ಆದೇಶ" ಎಂದರೆ, 3ನೇ ಪ್ರಕರಣದ ಮೇರೆಗೆ ಮಾಡಿದ ಆದೇಶ;

(ಸಿ) "ವಿದೇಶೀಯ" ಎಂಬುದು ವಿದೇಶೀಯರ ಅಧಿನಿಯಮ, 1946 (1946ರ 52)ರಲ್ಲಿರುವಂಥದೇ ಅರ್ಥವನ್ನು ಹೊಂದಿರುತ್ತದೆ;

(ಡಿ) "ಭಾರತ ಸೀಮಾ ಸುಂಕ ಸಮುದ್ರ ಭಾಗ" ಎಂಬುದು ಸೀಮಾ ಸುಂಕ ಅಧಿನಿಯಮ, 1962 (1962ರ 52)ರ 2ನೇ ಪ್ರಕರಣದ (28)ನೇ ಖಂಡದಲ್ಲಿರುವಂಥದೇ ಅರ್ಥವನ್ನು ಹೊಂದಿರುತ್ತದೆ;

(ಇ) "ಕಳ್ಳಸಾಗಣೆ" ಎಂಬುದು ಸೀಮಾ ಸುಂಕ ಅಧಿನಿಯಮ, 1962 (1962ರ 52)ರ 2ನೇ ಪ್ರಕರಣದ (39)ನೇ ಖಂಡದಲ್ಲಿರುವಂಥದೇ ಅರ್ಥವನ್ನು ಹೊಂದಿರುತ್ತದೆ ಮತ್ತು ಅದರ ಎಲ್ಲಾ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಎಫ್) ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಪಟ್ಟಂತೆ "ರಾಜ್ಯ ಸರ್ಕಾರ" ಎಂದರೆ, ಅದರ ಆಡಳಿತಗಾರ;

(ಜಿ) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಕಾನೂನಿಗೆ ಆ ರಾಜ್ಯದ ಸಂಬಂಧವಾಗಿ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಅದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**3. ಕೆಲವು ವ್ಯಕ್ತಿಗಳಿಗೆ ಸ್ಥಾನಬದ್ಧತೆಯಲ್ಲಿರುವ ಆದೇಶಗಳನ್ನು ಮಾಡಲು ಅಧಿಕಾರ.–** (1) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಈ ಪ್ರಕರಣದ ಉದ್ದೇಶಗಳಿಗಾಗಿ ವಿಶೇಷವಾಗಿ ಶಕ್ತಗೊಳಿಸಿದ ಆ ಸರ್ಕಾರದ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದ ಕೇಂದ್ರ ಸರ್ಕಾರದ ಯಾರೇ ಅಧಿಕಾರಿ ಅಥವಾ ರಾಜ್ಯ ಸರ್ಕಾರವು ಈ ಪ್ರಕರಣದ ಉದ್ದೇಶಗಳಿಗಾಗಿ ವಿಶೇಷವಾಗಿ ಶಕ್ತಗೊಳಿಸಿದ ಆ ಸರ್ಕಾರದ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆ ಇಲ್ಲದ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯು ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ (ವಿದೇಶಿಯನನ್ನು ಒಳಗೊಂಡು) ವಿದೇಶಿ ವಿನಿಮಯದ

ಸಂರಕ್ಷಣೆ ಅಥವಾ ಹೆಚ್ಚಳಕ್ಕೆ ಪ್ರತಿಕೂಲವಾದ ಯಾವುದೇ ರೀತಿಯಲ್ಲಿ ಆ ವ್ಯಕ್ತಿಯು ಕಾರ್ಯನಿರ್ವಹಿಸುವುದನ್ನು ಪ್ರತಿಬಂಧಿಸುವ ದೃಷ್ಟಿಯಿಂದ ಅಥವಾ ಅವನನ್ನು,-

(i) ಸರಕುಗಳ ಕಳ್ಳಸಾಗಣೆ; ಅಥವಾ

(ii) ಸರಕುಗಳ ಕಳ್ಳಸಾಗಣೆಯನ್ನು ದುಷ್ಪ್ರೇರಿಸುವುದು; ಅಥವಾ

(iii) ಕಳ್ಳಸಾಗಣೆ ಸರಕುಗಳನ್ನು ಸಾಗಣೆ ಮಾಡುವ ಅಥವಾ ಅವುಗಳನ್ನು ಬಚ್ಚಿಡುವುದು ಅಥವಾ ಇಟ್ಟುಕೊಳ್ಳುವುದರಲ್ಲಿ ತೊಡಗಿರುವುದು; ಅಥವಾ

(iv) ಕಳ್ಳಸಾಗಣೆ ಸರಕುಗಳನ್ನು ಸಾಗಣೆ ಮಾಡುವುದು ಅಥವಾ ಅವುಗಳನ್ನು ಬಚ್ಚಿಡುವುದು ಅಥವಾ ಇಟ್ಟುಕೊಳ್ಳುವುದರಲ್ಲಿ ತೊಡಗಿರುವುದನ್ನು ಹೊರತುಪಡಿಸಿ, ಕಳ್ಳಸಾಗಣೆ ಸರಕುಗಳಲ್ಲಿ ವ್ಯವಹರಿಸುವುದು; ಅಥವಾ

(v) ಸರಕುಗಳ ಕಳ್ಳಸಾಗಣೆಯಲ್ಲಿ ತೊಡಗಿರುವ ಅಥವಾ ಸರಕುಗಳ ಕಳ್ಳಸಾಗಣೆಗೆ ದುಷ್ಪ್ರೇರಿಸುವ ವ್ಯಕ್ತಿಗಳಿಗೆ ಆಶ್ರಯ ಕೊಡುವುದು

– ಇವುಗಳಿಂದ ಅವನನ್ನು ಪ್ರತಿಬಂಧಿಸುವ ದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯವೆಂದು ಅದು ಮನದಟ್ಟು ಮಾಡಿಕೊಂಡರೆ ಅಂಥ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡತಕ್ಕದ್ದೆಂದು ನಿರ್ದೇಶಿಸುವ ಆದೇಶವನ್ನು ಮಾಡಬಹುದು:

ಪರಂತು, ಈ ಉಪಪ್ರಕರಣದ ಮೇಲೆ ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ಕಳ್ಳಸಾಗಣೆ ಪ್ರತಿಬಂಧ ಅಧಿನಿಯಮ, 1988ರ 3ನೇ ಪ್ರಕರಣದ ಮೇರೆಗೆ ಅಥವಾ ಜಮ್ಮು ಮತ್ತು ಕಾಶ್ಮೀರ ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ಕಳ್ಳಸಾಗಣೆ ಪ್ರತಿಬಂಧ ಅಧಿನಿಯಮ, 1988 (1988ರ ಜಮ್ಮು ಮತ್ತು ಕಾಶ್ಮೀರ ಅಧ್ಯಾದೇಶ–1)ರ 3ನೇ ಪ್ರಕರಣದ ಮೇರೆಗೆ ಸ್ಥಾನಬದ್ಧತಾ ಆದೇಶವನ್ನು ಮಾಡಬಹುದಾಗಿದೆಯೋ ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾರಣಗಳ ಮೇಲೆ ಯಾವುದೇ ಸ್ಥಾನಬದ್ಧತಾ ಆದೇಶವನ್ನು ಮಾಡತಕ್ಕದ್ದಲ್ಲ.

(2) ಸ್ಥಾನಬದ್ಧತಾ ಆದೇಶವನ್ನು ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರವು ಶಕ್ತಗೊಳಿಸಿದ ಅಧಿಕಾರಿಯು ಮಾಡಿದಾಗ ರಾಜ್ಯ ಸರ್ಕಾರವು ಹತ್ತು ದಿವಸಗಳೊಳಗೆ ಆ ಆದೇಶಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸತಕ್ಕದ್ದು.

(3) ಸಂವಿಧಾನದ 22ನೇ ಅನುಚ್ಛೇದದ (5)ನೇ ಖಂಡದ ಉದ್ದೇಶಗಳಿಗಾಗಿ ಯಾವ ಕಾರಣಗಳ ಮೇಲೆ ಆದೇಶವನ್ನು ಮಾಡಲಾಗಿದೆಯೋ ಆ ಕಾರಣಗಳನ್ನು ಸ್ಥಾನಬದ್ಧತಾ ಆದೇಶದ ಅನುಸರಣೆಯಲ್ಲಿ

ಸ್ಥಾನಬದ್ಧತೆಯಲ್ಲಿಟ್ಟಿರುವ ವ್ಯಕ್ತಿಗೆ ಸ್ಥಾನಬದ್ಧತೆಯ ತರುವಾಯ ಆದಷ್ಟು ಬೇಗನೆ, ಆದರೆ ಐದು ದಿವಸಗಳಿಗೆ ಮೀರದಂತೆ ಮತ್ತು ಅಸಾಧಾರಣ ಸಂದರ್ಭಗಳಲ್ಲಿ ಮತ್ತು ಬರವಣಿಗೆಯಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಸ್ಥಾನಬದ್ಧತೆಯ ದಿನಾಂಕದಿಂದ 15 ದಿವಸಗಳನ್ನು ಮೀರದಂತೆ ತಿಳಿಸತಕ್ಕದ್ದು.

**4. ಸ್ಥಾನಬದ್ಧತಾ ಆದೇಶಗಳ ಜಾರಿ.–** ಸ್ಥಾನಬದ್ಧತಾ ಆದೇಶವನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ದಸ್ತಗಿರಿ ವಾರಂಟುಗಳ ಜಾರಿಗಾಗಿ ಉಪಬಂಧಿಸಿರುವ ರೀತಿಯಲ್ಲಿ ಭಾರತದಲ್ಲಿನ ಯಾವುದೇ ಸ್ಥಳದಲ್ಲಿ ಜಾರಿ ಮಾಡಬಹುದು.

**5. ಸ್ಥಾನಬದ್ಧತೆಯ ಸ್ಥಳ ಮತ್ತು ಷರತ್ತುಗಳನ್ನು ವಿನಿಯಮಿಸಲು ಅಧಿಕಾರ:–** ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಸ್ಥಾನಬದ್ಧತಾ ಆದೇಶವನ್ನು ಮಾಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು,–

(ಎ) ಪೋಷಣೆ, ಇತರರೊಂದಿಗೆ ಸಂದರ್ಶನಗಳು ಅಥವಾ ಪತ್ರ ವ್ಯವಹಾರ, ಶಿಸ್ತು ಮತ್ತು ಶಿಸ್ತಿನ ಉಲ್ಲಂಘನೆಗಳಿಗಾಗಿನ ದಂಡನೆ ಇವುಗಳಿಗೆ ಸಂಬಂಧಿಸಿದ ಷರತ್ತುಗಳನ್ನು ಒಳಗೊಂಡು ಸಮುಚಿತ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳ ಮತ್ತು ಅಂಥ ಷರತ್ತುಗಳ ಮೇರೆಗೆ ಸ್ಥಾನಬದ್ಧತೆಗೆ; ಮತ್ತು

(ಬಿ) ಸಮುಚಿತ ಸರ್ಕಾರದ ಆದೇಶದ ಮೂಲಕ ಅದೇ ರಾಜ್ಯದೊಳಗೆ ಆಗಲಿ ಅಥವಾ ಇನ್ನೊಂದು ರಾಜ್ಯದೊಳಗೆ ಆಗಲಿ ಸ್ಥಾನಬದ್ಧತೆಯ ಒಂದು ಸ್ಥಳದಿಂದ ಸ್ಥಾನಬದ್ಧತೆಯ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳಲು ಗುರಿಯಾಗತಕ್ಕದ್ದು:

ಪರಂತು, ಒಂದು ರಾಜ್ಯ ಸರ್ಕಾರವು ಒಬ್ಬ ವ್ಯಕ್ತಿಯನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸ್ಥಳಾಂತರಿಸುವುದಕ್ಕಾಗಿ, ಆ ಇತರ ರಾಜ್ಯ ಸರ್ಕಾರದ ಸಮ್ಮತಿಯಿಲ್ಲದೆ (ಬಿ) ಖಂಡದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**5ಎ. ಸ್ಥಾನಬದ್ಧತೆಯ ಕಾರಣಗಳನ್ನು ಬೇರ್ಪಡಿಸಬಹುದು.–** ಎರಡು ಅಥವಾ ಅದಕ್ಕಿಂತ ಹೆಚ್ಚು ಕಾರಣಗಳ ಮೇರೆಗೆ ಮಾಡಲಾಗಿರುವಂಥ 3ನೇ ಪ್ರಕರಣದ (1)ನೇ ಉಪಪ್ರಕರಣ ಮೇರೆಗಿನ ಸ್ಥಾನಬದ್ಧತಾ ಆದೇಶದ ಅನುಸರಣೆಯಲ್ಲಿ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಲಾಗಿರುವಲ್ಲಿ ಸ್ಥಾನಬದ್ಧತಾ ಆದೇಶವನ್ನು ಅಂಥ ಪ್ರತಿಯೊಂದು ಕಾರಣದ ಮೇಲೆ ಪ್ರತ್ಯೇಕವಾಗಿ ಮಾಡಲಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ತದನುಸರವಾಗಿ,–

(ಎ) ಅಂಥ ಆದೇಶವನ್ನು, ಆ ಕಾರಣಗಳ ಪೈಕಿ ಒಂದು ಅಥವಾ ಕೆಲವು ಕಾರಣಗಳು,–

(i) ಅಸ್ಪಷ್ಟವಾಗಿದೆ ಅಥವಾ ಆಗಿವೆ;

(ii) ಅಸ್ತಿತ್ವದಲ್ಲಿಲ್ಲ;

(iii) ಸುಸಂಬದ್ಧವಾಗಿಲ್ಲ;

(iv) ಅಂಥ ವ್ಯಕ್ತಿಗೆ ಸಂಬಂಧಪಟ್ಟಿಲ್ಲ ಅಥವಾ ನಿಕಟವಾಗಿ ಸಂಬಂಧಪಟ್ಟಿಲ್ಲ; ಅಥವಾ

(v) ಯಾವುದೇ ಆಗಲಿ ಇತರ ಯಾವುದೇ ಕಾರಣದಿಂದಾಗಿ ಅಸಿಂಧುವಾಗಿದೆ ಅಥವಾ ಆಗಿವೆ

– ಎಂಬ ಕಾರಣ ಮಾತ್ರದಿಂದಲೇ ಅಸಿಂಧು ಅಥವಾ ಅಪ್ರವರ್ತನೀಯವಾಗಿರುವುದಾಗಿ ಮತ್ತು ಅದರಿಂದಾಗಿ ಉಳಿದ ಕಾರಣ ಅಥವಾ ಕಾರಣಗಳಿಗೆ ಸಂಬಂಧಪಟ್ಟಂತೆ 3ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವಂತೆ ಅಂಥ ಆದೇಶವನ್ನು ಮಾಡುವ ಸರ್ಕಾರ ಅಥವಾ ಅಧಿಕಾರಿಯು ಮನದಟ್ಟು ಮಾಡಿಕೊಂಡಿರುವುದಾಗಿ ನಿರ್ಣಯಿಸಲು ಸಾಧ್ಯವಿಲ್ಲವೆಂದು ಮತ್ತು ಸ್ಥಾನಬದ್ಧತಾ ಆದೇಶವನ್ನು ಮಾಡಿದನೆಂದು ಭಾವಿಸತಕ್ಕದ್ದಲ್ಲ.

(ಬಿ) ಸ್ಥಾನಬದ್ಧತಾ ಆದೇಶವನ್ನು ಮಾಡುವ ಸರ್ಕಾರ ಅಥವಾ ಅಧಿಕಾರಿಯು ಉಳಿದ ಕಾರಣ ಅಥವಾ ಕಾರಣಗಳಿಗೆ ಸಂಬಂಧಪಟ್ಟಂತೆ ಆ ಉಪಪ್ರಕರಣದಲ್ಲಿ ಉಪಬಂಧಿಸಿರುವಂತೆ ಮನದಟ್ಟು ಮಾಡಿಕೊಂಡ ತರುವಾಯ ಸದರಿ (1)ನೇ ಉಪಪ್ರಕರಣ ಮೇರೆಗೆ ಸ್ಥಾನಬದ್ಧತಾ ಆದೇಶವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು.

**6. ಕೆಲವು ಕಾರಣಗಳ ಮೇಲೆ ಸ್ಥಾನಬದ್ಧತಾ ಆದೇಶಗಳು ಅಸಿಂಧುವಾಗತಕ್ಕದ್ದಲ್ಲ ಅಥವಾ ಅಪ್ರವರ್ತನೀಯವಾಗತಕ್ಕದ್ದಲ್ಲ:–** ಯಾವುದೇ ಸ್ಥಾನಬದ್ಧತಾ ಆದೇಶವು,–

(ಎ) ಅದರ ಮೇರೆಗೆ ಸ್ಥಾನಬದ್ಧತೆಯಲ್ಲಿಡಬೇಕಾದ ವ್ಯಕ್ತಿಯು ಸ್ಥಾನಬದ್ಧತಾ ಆದೇಶವನ್ನು ಮಾಡುವ ಸರ್ಕಾರದ ಅಥವಾ ಅಧಿಕಾರಿಯ ಪ್ರಾದೇಶಿಕ ಅಧಿಕಾರವ್ಯಾಪ್ತಿಯ ಪರಿಮಿತಿಗಳ ಹೊರಗಿದ್ದಾನೆ; ಅಥವಾ

(ಬಿ) ಅಂಥ ವ್ಯಕ್ತಿಯು ಸ್ಥಾನಬದ್ಧತೆಯ ಸ್ಥಳವು ಸದರಿ ಪರಿಮಿತಿಗಳ ಹೊರಗಡೆ ಇದೆ

– ಎಂಬ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ ಅಥವಾ ಅಪ್ರವರ್ತನೀಯವಾಗತಕ್ಕದ್ದಲ್ಲ.

**7. ತಲೆಮರೆಸಿಕೊಂಡ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಅಧಿಕಾರಗಳು.–** (1) ಸಮುಚಿತ ಸರ್ಕಾರವು ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಸ್ಥಾನಬದ್ಧತಾ ಆದೇಶವನ್ನು ಮಾಡಿದೆಯೋ ಆ ವ್ಯಕ್ತಿಯು ಆ ಆದೇಶವನ್ನು

ಜಾರಿ ಮಾಡಲಾಗದಂತೆ ತಲೆಮರೆಸಿಕೊಂಡಿದ್ದಾನೆಂದು ಅಥವಾ ಬಚ್ಚಿಟ್ಟುಕೊಂಡಿದ್ದಾನೆಂದು ನಂಬಲು ಕಾರಣಗಳಿದ್ದರೆ, ಆ ಸರ್ಕಾರವು,–

(ಎ) ಸದರಿ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಸ್ಥಳದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಿಗೆ ಆ ಸಂಗತಿಯನ್ನು ಬರಹದಲ್ಲಿ ವರದಿ ಮಾಡಬಹುದು; ಮತ್ತು ಆ ತರುವಾಯ ಸದರಿ ವ್ಯಕ್ತಿ ಮತ್ತು ಅವನ ಸ್ವತ್ತಿಗೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 82, 83, 84 ಮತ್ತು 85ನೇ ಪ್ರಕರಣದ ಉಪಬಂಧಗಳು ಅವನನ್ನು ಸ್ಥಾನಬದ್ಧತೆಯಲ್ಲಿಡಬೇಕೆಂದು ನಿರ್ದೇಶಿಸುವ ಆದೇಶವು ಆ ಮ್ಯಾಜಿಸ್ಟ್ರೇಟನು ಹೊರಡಿಸಿದ ವಾರಂಟ್ ಆಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(ಬಿ) ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಿದ ಆದೇಶದ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯ ಮುಂದೆ ಅಂಥ ಸ್ಥಳದಲ್ಲಿ ಮತ್ತು ಅಂಥ ಅವಧಿಯೊಳಗಾಗಿ ಹಾಜರಾಗಲು ಸದರಿ ವ್ಯಕ್ತಿಗೆ ನಿರ್ದೇಶಿಸಬಹುದು ಮತ್ತು ಸದರಿ ವ್ಯಕ್ತಿಯು ಅಂಥ ನಿರ್ದೇಶನವನ್ನು ಪಾಲಿಸಲು ತನಗೆ ಸಾಧ್ಯವಾಗಲಿಲ್ಲವೆಂದು ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಆದೇಶದಲ್ಲಿ ನಮೂದಿಸಿದ ಅಧಿಕಾರಿಗೆ ಆ ನಿರ್ದೇಶನವನ್ನು ಪಾಲಿಸಲು ತನ್ನನ್ನು ಅಸಾಧ್ಯಗೊಳಿಸಿದಂಥ ಕಾರಣವನ್ನು ಮತ್ತು ತಾನು ಇರುವ ಸ್ಥಳವನ್ನು ತಿಳಿಸಿದ್ದನೆಂದು ರುಜುವಾತುಪಡಿಸಿದ ಹೊರತು ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973 (1942ರ 2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗಿನ ಪ್ರತಿ ಅಪರಾಧವು ಸಂಜ್ಞೇಯವಾಗತಕ್ಕದ್ದು.

**8. ಸಲಹಾ ಮಂಡಳಿಗಳು.–** ಸಂವಿಧಾನದ 22ನೇ ಅನುಚ್ಛೇದದ (4)ನೇ ಖಂಡದ (ಎ) ಉಪಖಂಡದ ಮತ್ತು (7)ನೇ ಖಂಡದ (ಸಿ) ಉಪಖಂಡದ ಉದ್ದೇಶಗಳಿಗಾಗಿ,–

(ಎ) ಕೇಂದ್ರ ಸರ್ಕಾರ ಮತ್ತು ಪ್ರತಿಯೊಂದು ರಾಜ್ಯ ಸರ್ಕಾರವು ಅವಶ್ಯವಾದಾಗಲೆಲ್ಲಾ, ಒಂದು ಅಥವಾ ಅದಕ್ಕಿಂತ ಹೆಚ್ಚು ಸಲಹಾ ಮಂಡಳಿಗಳನ್ನು ರಚಿಸತಕ್ಕದ್ದು, ಅಂಥ ಪ್ರತಿಯೊಂದು ಮಂಡಳಿಯು ಸಂವಿಧಾನದ 22ನೇ ಅನುಚ್ಛೇದದ (4)ನೇ ಖಂಡದ (ಎ) ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರುವ ಅಧ್ಯಕ್ಷ ಮತ್ತು ಇಬ್ಬರು ವ್ಯಕ್ತಿಗಳನ್ನೊಳಗೊಂಡಿರತಕ್ಕದ್ದು;

(ಬಿ) 9ನೇ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಸಮುಚಿತ ಸರ್ಕಾರವು ಸ್ಥಾನಬದ್ಧತಾ ಆದೇಶದ ಮೇರೆಗೆ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಟ್ಟ ದಿನಾಂಕದಿಂದ ಐದು ವಾರದೊಳಗೆ ಅದಕ್ಕೆ ಸಂಬಂಧಿಸಿದಂತೆ ಸಂವಿಧಾನದ 22ನೇ ಅನುಚ್ಛೇದದ (4)ನೇ ಖಂಡದ (ಎ) ಉಪಖಂಡದ ಮೇರೆಗೆ ವರದಿಯನ್ನು ಮಾಡಲು ಸಲಹಾ ಮಂಡಳಿಯನ್ನು ಶಕ್ತಗೊಳಿಸಲು (ಎ) ಖಂಡದ ಮೇರೆಗೆ ರಚಿಸಿದ ಸಲಹಾ ಮಂಡಳಿಗೆ ಅಭಿಪ್ರಾಯ ಕೋರಿಕೆಗಾಗಿ ಕಳುಹಿಸತಕ್ಕದ್ದು;

(ಸಿ) ಯಾವ ಸಲಹಾ ಮಂಡಳಿಗೆ (ಬಿ) ಖಂಡದ ಮೇರೆಗೆ ಅಭಿಪ್ರಾಯ ಕೋರಿಕೆಯನ್ನು ಮಾಡಿಕೊಳ್ಳಲಾಗಿದೆಯೋ ಆ ಸಲಹಾ ಮಂಡಳಿಯು, ಆ ಅಭಿಪ್ರಾಯ ಕೋರಿಕೆ ಮತ್ತು ಅದರ ಮುಂದೆ ಇಟ್ಟ ವಿಷಯಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಅವಶ್ಯವೆಂದು ಭಾವಿಸಬಹುದಾದಂಥ ಇನ್ನೂ ಹೆಚ್ಚಿನ ಮಾಹಿತಿಯನ್ನು ಸಮುಚಿತ ಸರ್ಕಾರ ಅಥವಾ ಸಮುಚಿತ ಸರ್ಕಾರದ ಮೂಲಕ ಆ ಉದ್ದೇಶಕ್ಕಾಗಿ ಕರೆಯಲಾದ ಯಾರೇ ವ್ಯಕ್ತಿಯಿಂದ ಅಥವಾ ಸಂಬಂಧಪಟ್ಟ ವ್ಯಕ್ತಿಯಿಂದ ತರಿಸಿಕೊಂಡ ತರುವಾಯ ಮತ್ತು ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಹಾಗೆ ಮಾಡುವುದು ಅವಶ್ಯವೆಂದು ಅದು ಪರ್ಯಾಲೋಚಿಸಿದರೆ ಅಥವಾ ಸಂಬಂಧಪಟ್ಟ ವ್ಯಕ್ತಿಯು ಅಹವಾಲನ್ನು ಖುದ್ದಾಗಿ ಹೇಳಿಕೊಳ್ಳಲು ಇಚ್ಛಿಸಿದರೆ, ಖುದ್ದಾಗಿ ಅವನನ್ನು ವಿಚಾರಣೆ ಮಾಡಿದ ತರುವಾಯ, ಅದರ ವರದಿಯನ್ನು ಅದರಲ್ಲಿನ ಪ್ರತ್ಯೇಕ ಪ್ಯಾರಾದಲ್ಲಿ ಸಂಬಂಧಪಟ್ಟ ವ್ಯಕ್ತಿಯ ಸ್ಥಾನಬದ್ಧತೆಗಾಗಿ ಸಾಕಷ್ಟು ಕಾರಣ ಇದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ತನ್ನ ಅಭಿಪ್ರಾಯವನ್ನು ನಿರ್ದಿಷ್ಟಪಡಿಸಿ ತಯಾರಿಸತಕ್ಕದ್ದು ಮತ್ತು ಸಂಬಂಧಪಟ್ಟ ವ್ಯಕ್ತಿಯ ಸ್ಥಾನಬದ್ಧತೆಯ ದಿನಾಂಕದಿಂದ ಹನ್ನೊಂದು ವಾರಗಳೊಳಗೆ ಅದನ್ನು ಒಪ್ಪಿಸತಕ್ಕದ್ದು;

(ಡಿ) ಸಲಹಾ ಮಂಡಳಿಯಲ್ಲಿರುವ ಸದಸ್ಯರಲ್ಲಿ ಭಿನ್ನಾಭಿಪ್ರಾಯವಿರುವಾಗ ಅಂಥ ಸದಸ್ಯರ ಬಹುಮತದ ಅಭಿಪ್ರಾಯವನ್ನು ಮಂಡಳಿಯ ಅಭಿಪ್ರಾಯವೆಂಬುದಾಗಿ ಭಾವಿಸತಕ್ಕದ್ದು;

(ಇ) ಈ ಅಧಿನಿಯಮದ ಮೇರೆಗೆ ಯಾವ ವ್ಯಕ್ತಿಯ ವಿರುದ್ಧ ಸ್ಥಾನಬದ್ಧತೆಯ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಸಲಹಾ ಮಂಡಳಿಗೆ ಮಾಡಿದ ಅಭಿಪ್ರಾಯ ಕೋರಿಕೆಗೆ ಸಂಬಂಧಪಟ್ಟ ಯಾವುದೇ ವಿಷಯದಲ್ಲಿ ಯಾರೇ ನ್ಯಾಯವಾದಿಯು ಸಲಹಾ ಮಂಡಳಿಯ ಅಭಿಪ್ರಾಯವನ್ನು ನಿರ್ದಿಷ್ಟಪಡಿಸಿರುವ ಭಾಗವನ್ನು ಹೊರತುಪಡಿಸಿ ಗೌಪ್ಯವಾಗಿರತಕ್ಕದ್ದು;

(ಎಫ್) ಸಲಹಾ ಮಂಡಳಿಯು ತನ್ನ ಅಭಿಪ್ರಾಯದಲ್ಲಿ ಒಬ್ಬ ವ್ಯಕ್ತಿಯ ಸ್ಥಾನಬದ್ಧತೆಗಾಗಿ ಸಾಕಷ್ಟು ಕಾರಣಗಳಿವೆ ಎಂದು ಅದು ವರದಿ ಮಾಡಿರುವ ಪ್ರತಿಯೊಂದು ಸಂದರ್ಭದಲ್ಲಿ ಸಮುಚಿತ ಸರ್ಕಾರವು ಸ್ಥಾನಬದ್ಧತಾ ಆದೇಶವನ್ನು ಸ್ವೀಕರಿಸಬಹುದು ಮತ್ತು ಅದು ಯುಕ್ತ ಎಂದು ಯೋಚಿಸುವಂಥ

ಅವಧಿಯವರೆಗೆ ಸಂಬಂಧಪಟ್ಟ ವ್ಯಕ್ತಿಯ ಸ್ಥಾನಬದ್ಧತೆಗಾಗಿ ಸಾಕಷ್ಟು ಕಾರಣವಿಲ್ಲವೆಂದು ಅದು ವರದಿ ಮಾಡಿರುವ ಪ್ರತಿಯೊಂದು ಸಂದರ್ಭದಲ್ಲಿ ಸಮುಚಿತ ಸರ್ಕಾರವು ಆ ಸ್ಥಾನಬದ್ಧತೆಯ ಆದೇಶವನ್ನು ರದ್ದುಗೊಳಿಸತಕ್ಕದ್ದು ಮತ್ತು ಆ ವ್ಯಕ್ತಿಯನ್ನು ತಕ್ಷಣ ಬಿಡುಗಡೆ ಮಾಡುವಂತೆ ಮಾಡತಕ್ಕದ್ದು.

**9. ಸಲಹಾ ಮಂಡಳಿಯ ಅಭಿಪ್ರಾಯವನ್ನು ಪಡೆದುಕೊಳ್ಳದ ಮೂರು ತಿಂಗಳುಗಳಿಗಿಂತ ಹೆಚ್ಚಾದ ಅವಧಿಗಳವರೆಗೆ ವ್ಯಕ್ತಿಗಳನ್ನು ಸ್ಥಾನಬದ್ಧತೆಯಲ್ಲಿಡಬಹುದಾದ ಪ್ರಕರಣಗಳು ಮತ್ತು ಸಂದರ್ಭಗಳು.–** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, 31ನೇ ಜುಲೈ, 1990ಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಈ ಅಧಿನಿಯಮದ ಮೇರೆಗೆ ಸ್ಥಾನಬದ್ಧತಾ ಆದೇಶವನ್ನು ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯನ್ನು (ವಿದೇಶಿಯನನ್ನು ಒಳಗೊಂಡು) ಸಂವಿಧಾನದ 22ನೇ ಅನುಚ್ಛೇದದ (4)ನೇ ಖಂಡದ (ಎ) ಉಪಖಂಡದ ಉಪಬಂಧಗಳಿಗೆ ಅನುಸಾರವಾಗಿ ಸಲಹಾ ಮಂಡಳಿಯ ಅಭಿಪ್ರಾಯವನ್ನು ಪಡೆದುಕೊಳ್ಳದೆ, ಆ ಸ್ಥಾನಬದ್ಧತಾ ಆದೇಶವನ್ನು, ಅಂಥ ವ್ಯಕ್ತಿಯ ವಿರುದ್ಧ ಅವನ ಸರಕುಗಳನ್ನು ಕಳ್ಳಸಾಗಣೆ ಮಾಡುವುದರಿಂದ ಅಥವಾ ಸರಕುಗಳ ಕಳ್ಳಸಾಗಣಿಕೆಗೆ ದುಷ್ಪ್ರೇರಣೆ ನೀಡುವುದರಿಂದ ಅಥವಾ ಕಳ್ಳಸಾಗಣೆ ಸರಕುಗಳನ್ನು ಸಾಗಣೆ ಮಾಡುವುದು ಅಥವಾ ಅವುಗಳನ್ನು ಬಚ್ಚಿಡುವುದು ಅಥವಾ ಇಟ್ಟುಕೊಳ್ಳುವುದರಲ್ಲಿ ತೊಡಗುವುದರಿಂದ ಪ್ರತಿಬಂಧಿಸುವ ದೃಷ್ಟಿಯಿಂದ ಮಾಡಲಾಗಿರುವಲ್ಲಿ ಮತ್ತು ಕೇಂದ್ರ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ಈ ಪ್ರಕರಣದ ಉದ್ದೇಶಗಳಿಗಾಗಿ ವಿಶೇಷವಾಗಿ ಶಕ್ತಗೊಳಿಸಿದ ಆ ಸರ್ಕಾರದ ಅಡಿಷನಲ್ ಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ಆ ಸರ್ಕಾರದ ಯಾರೇ ಅಧಿಕಾರಿಗೆ ಅಂಥ ವ್ಯಕ್ತಿಯು,–

(ಎ) ಕಳ್ಳಸಾಗಣೆಗೆ ಅತ್ಯಂತ ಭೇದ್ಯವಾದ ಯಾವುದೇ ಪ್ರದೇಶದೊಳಗೆ, ಅದರ ಹೊರಗಡೆ ಅಥವಾ ಅದರ ಮೂಲಕ ಕಳ್ಳಸಾಗಣೆಯ ಸರಕುಗಳನ್ನು ಕಳ್ಳಸಾಗಣೆ ಮಾಡುವನೆಂದು ಅಥವಾ ಕಳ್ಳಸಾಗಣೆ ಮಾಡುವ ಸಂಭವವಿದೆಯೆಂದು; ಅಥವಾ

(ಬಿ) ಕಳ್ಳಸಾಗಣೆಗೆ ಅತ್ಯಂತ ಭೇದ್ಯವಾದ ಯಾವುದೇ ಪ್ರದೇಶದೊಳಗೆ, ಅದರ ಹೊರಗಡೆ ಅಥವಾ ಅದರ ಮೂಲಕ ಸರಕುಗಳ ಕಳ್ಳಸಾಗಣೆಯನ್ನು ದುಷ್ಪ್ರೇರಿಸುವನೆಂದು ಅಥವಾ ದುಷ್ಪ್ರೇರಿಸುವ ಸಂಭವವಿದೆಯೆಂದು; ಅಥವಾ

(ಸಿ) ಕಳ್ಳಸಾಗಣೆಗೆ ಅತ್ಯಂತ ಭೇದ್ಯವಾದ ಯಾವುದೇ ಪ್ರದೇಶದಲ್ಲಿ ಕಳ್ಳಸಾಗಣೆಯ ಸರಕುಗಳ ಸಾಗಣೆ ಮಾಡುವುದು ಅಥವಾ ಅವುಗಳನ್ನು ಬಚ್ಚಿಡುವುದು ಅಥವಾ ಇಟ್ಟುಕೊಳ್ಳುವುದರಲ್ಲಿ ತೊಡಗಿರುವನೆಂದು ಅಥವಾ ತೊಡಗುವ ಸಂಭವವಿದೆಯೆಂದು

– ಮನದಟ್ಟಾದರೆ ಮತ್ತು ಅಂಥ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಟ್ಟ ಐದು ವಾರಗಳೊಳಗೆ ಆ ಬಗ್ಗೆ ಘೋಷಣೆಯನ್ನು ಮಾಡಿದರೆ, ಆ ಸ್ಥಾನಬದ್ಧತೆಯ ದಿನಾಂಕದಿಂದ ಮೂರು ತಿಂಗಳುಗಳಿಗಿಂತ ಹೆಚ್ಚಾಗಿ ಆದರೆ ಆರು ತಿಂಗಳುಗಳನ್ನು ಮೀರದಂತೆ ಸ್ಥಾನಬದ್ಧತೆಯಲ್ಲಿಡಬಹುದು.

**ವಿವರಣೆ 1.–** ಈ ಉಪಪ್ರಕರಣದಲ್ಲಿ, "ಕಳ್ಳಸಾಗಣೆಗೆ ಅತ್ಯಂತ ಭೇದ್ಯವಾದ ಪ್ರದೇಶ" ಎಂದರೆ:–

(i) ಗೋವಾ, ಗುಜರಾತ್, ಕರ್ನಾಟಕ, ಕೇರಳ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಿಗೆ ಮತ್ತು ದಾಮನ್ ಮತ್ತು ದಿಯು ಮತ್ತು ಪಾಂಡಿಚೇರಿಯ ಒಕ್ಕೂಟ ರಾಜ್ಯಕ್ಷೇತ್ರಗಳೊಳಗೆ ಹೊಂದಿಕೊಂಡಿರುವ ಭಾರತದ ಸೀಮಾ ಸುಂಕ ಸಮುದ್ರ ಭಾಗ;

(ii) ಗೋವಾ, ಗುಜರಾತ್, ಕರ್ನಾಟಕ, ಕೇರಳ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳ ಮತ್ತು ದಾಮನ್ ಮತ್ತು ದಿಯು ಮತ್ತು ಪಾಂಡಿಚೇರಿಯ ಒಕ್ಕೂಟ ರಾಜ್ಯಕ್ಷೇತ್ರಗಳೊಳಗೆ ಇರುವ ಭಾರತದ ಕರಾವಳಿಯಿಂದ ಐವತ್ತು ಕಿಲೋಮೀಟರ್ ಅಗಲದ ಒಳನಾಡು ಪ್ರದೇಶ;

(iii) ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಪಂಜಾಬ್ ಮತ್ತು ರಾಜಸ್ಥಾನದ ರಾಜ್ಯಗಳಲ್ಲಿ ಭಾರತ–ಪಾಕಿಸ್ತಾನ ಗಡಿಯಿಂದ ಐವತ್ತು ಕಿಲೋಮೀಟರ್ ಅಗಲದ ಒಳನಾಡು ಪ್ರದೇಶ;

(iv) ದೆಹಲಿಯ ಸೀಮಾ ಸುಂಕ ವಿಮಾನ ನಿಲ್ದಾಣ; ಮತ್ತು

(v) ಭಾರತದ ಯಾವುದೇ ಇತರ ಕರಾವಳಿ ಅಥವಾ ಗಡಿಯಿಂದ ಒಂದು ನೂರು ಕಿಲೋಮೀಟರ್ ಅಗಲವನ್ನು ಮೀರದಂಥ ಇನ್ನೂ ಹೆಚ್ಚಿನ ಅಥವಾ ಭಾರತದ ಇತರ ಸೀಮಾ ಸುಂಕ ಸಮುದ್ರ ಭಾಗ ಅಥವಾ ಸಂದರ್ಭಾನುಸಾರ ಅಂಥ ಸಮುದ್ರ ಭಾಗ, ಪ್ರದೇಶ ಅಥವಾ ಸೀಮಾ ಸುಂಕದ ಕಟ್ಟೆಯ ಭೇದ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಕೇಂದ್ರ ಸರ್ಕಾರವು ಈ ಬಗ್ಗೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸೀಮಾ ಸುಂಕ ಕಟ್ಟೆ.

**ವಿವರಣೆ 2.–** 1ನೇ ವಿವರಣೆಯ ಉದ್ದೇಶಗಳಿಗಾಗಿ "ಸೀಮಾ ಸುಂಕ ವಿಮಾನ ನಿಲ್ದಾಣ" ಮತ್ತು "ಸೀಮಾ ಸುಂಕ ಕಟ್ಟೆ" ಎಂಬವು ಅನುಕ್ರಮವಾಗಿ ಸೀಮಾ ಸುಂಕ ಅಧಿನಿಯಮ, 1962 (1962ರ 52)ರ 2ನೇ ಪ್ರಕರಣದ (10) ಮತ್ತು (13)ನೇ ಖಂಡದಲ್ಲಿರುವಂಥದೇ ಅರ್ಥವನ್ನು ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗುವಂಥ ಸ್ಥಾನಬದ್ಧತಾ ಆದೇಶದ ಮೇರೆಗೆ ಸ್ಥಾನಬದ್ಧತೆಯಲ್ಲಿಟ್ಟ ಯಾರೇ ವ್ಯಕ್ತಿಯ ಸಂದರ್ಭದಲ್ಲಿ 8ನೇ ಪ್ರಕರಣವು ಈ ಕೆಳಕಂಡ ಮಾರ್ಪಾಟುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು.

(i) (ಬಿ) ಖಂಡದಲ್ಲಿ "ಐದು ವಾರಗಳೊಳಗೆ" ಎಂಬ ಪದಗಳಿಗೆ ಬದಲಾಗಿ "ನಾಲ್ಕು ತಿಂಗಳುಗಳು ಮತ್ತು ಎರಡು ವಾರಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಸಿ) ಖಂಡದಲ್ಲಿ,–

(1) "ಸಂಬಂಧಪಟ್ಟ ವ್ಯಕ್ತಿಯ ಸ್ಥಾನಬದ್ಧತೆ" ಎಂಬ ಪದಗಳಿಗೆ ಬದಲಾಗಿ "ಸಂಬಂಧಪಟ್ಟ ವ್ಯಕ್ತಿಯ ಮುಂದುವರಿದ ಸ್ಥಾನಬದ್ಧತೆ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(2) "ಹನ್ನೊಂದು ವಾರಗಳು" ಎಂಬ ಪದಗಳಿಗೆ ಬದಲಾಗಿ "ಐದು ತಿಂಗಳುಗಳು ಮತ್ತು ಮೂರು ವಾರಗಳು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(iii) (ಎಫ್) ಖಂಡದಲ್ಲಿ "ಸ್ಥಾನಬದ್ಧತೆಗಾಗಿ" ಎಂಬ ಪದಗಳಿಗೆ ಬದಲಾಗಿ ಅವು ಬರುವ "ಎರಡೂ ಕಡೆಗಳಲ್ಲಿ ಮುಂದುವರಿದ ಸ್ಥಾನಬದ್ಧತೆಗಾಗಿ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**10. ಸ್ಥಾನಬದ್ಧತೆಯ ಗರಿಷ್ಠ ಅವಧಿ.–** 9ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಂಥ ಮತ್ತು 8ನೇ ಪ್ರಕರಣದ (ಎಫ್) ಖಂಡದ ಮೇರೆಗೆ ಸ್ವೀಕರಿಸಲಾಗಿರುವಂಥ ಯಾವುದೇ ಸ್ಥಾನಬದ್ಧತಾ ಆದೇಶದ ಮೇರೆಗೆ ಯಾರೇ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಬಹುದಾದಂಥ ಗರಿಷ್ಠ ಅವಧಿಯು ಸ್ಥಾನಬದ್ಧತೆಯಲ್ಲಿಟ್ಟ ದಿನಾಂಕದಿಂದ ಒಂದು ವರ್ಷದ ಅವಧಿ ಅಥವಾ ನಿರ್ದಿಷ್ಟಪಡಿಸಿದ ಅವಧಿ ಇವುಗಳಲ್ಲಿ ಯಾವುದು ನಂತರ ಮುಕ್ತಾಯಗೊಳ್ಳುವುದೋ ಆ ಅವಧಿಯಾಗಿರತಕ್ಕದ್ದು ಮತ್ತು 9ನೇ ಪ್ರಕರಣದ ಉಪಬಂಧಗಳು ಅನ್ವಯವಾಗುವ ಮತ್ತು 9ನೇ ಪ್ರಕರಣದ (2)ನೇ ಉಪಪ್ರಕರಣದೊಂದಿಗೆ ಓದಿಕೊಂಡ 8ನೇ ಪ್ರಕರಣದ (ಎಫ್) ಖಂಡದ ಮೇರೆಗೆ ಸ್ವೀಕರಿಸಲಾಗಿರುವಂಥ ಸ್ಥಾನಬದ್ಧತಾ ಆದೇಶದ ಮೇರೆಗೆ ಸ್ಥಾನಬದ್ಧತೆಯಲ್ಲಿಟ್ಟ ಯಾರೇ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಬಹುದಾದಂಥ ಗರಿಷ್ಠ ಅವಧಿಯು ಸ್ಥಾನಬದ್ಧತೆಯಲ್ಲಿಟ್ಟ ದಿನಾಂಕದಿಂದ ಎರಡು ವರ್ಷಗಳ ಅವಧಿ ಅಥವಾ ನಿರ್ದಿಷ್ಟಪಡಿಸಿದ ಅವಧಿ ಇವುಗಳಲ್ಲಿ ಯಾವುದು ನಂತರ ಮುಕ್ತಾಯಗೊಳ್ಳುವುದೋ ಆ ಅವಧಿಯಾಗಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದಾವುದೂ, ಯಾವುದೇ ಪ್ರಕರಣದಲ್ಲಿ ಯಾವುದೇ ಮುಂಚಿತವಾದ ಕಾಲದಲ್ಲಿ ಆ ಸ್ಥಾನಬದ್ಧ ಆದೇಶವನ್ನು ರದ್ದು ಮಾಡಲು ಅಥವಾ ಮಾರ್ಪಾಟು ಮಾಡಲು ಸಮುಚಿತ ಸರ್ಕಾರದ ಅಧಿಕಾರಕ್ಕೆ ಬಾಧಕವಾಗತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದಲ್ಲಿ ಮತ್ತು 10ಎ ಪ್ರಕರಣದಲ್ಲಿ, "ನಿರ್ದಿಷ್ಟಪಡಿಸಿದ ಅವಧಿ" ಎಂದರೆ, 1971ರ ಡಿಸೆಂಬರ್ 3ನೇ ದಿನದಂದು ಸಂವಿಧಾನದ 352ನೇ ಅನುಚ್ಛೇದದ ಖಂಡ (1)ರ ಮೇರೆಗೆ ಹೊರಡಿಸಿದ ತುರ್ತುಪರಿಸ್ಥಿತಿಯ ಉದ್ಘೋಷಣೆಯಲ್ಲಿರುವಂಥ ಅವಧಿ ಮತ್ತು 1975ರ ಜೂನ್ 25ನೇ ದಿನದಂದು ಅದೇ

ಖಂಡದ ಮೇರೆಗೆ ಹೊರಡಿಸಿದ ತುರ್ತುಪರಿಸ್ಥಿತಿಯ ಉದ್ಘೋಷಣೆಯ ಅವಧಿ– ಇವೆರಡೂ ಜಾರಿಯಲ್ಲಿರುತ್ತವೆ.

**10ಎ. ಸ್ಥಾನಬದ್ಧತಾ ಅವಧಿಯ ವಿಸ್ತರಣೆ.–** (1) ಈ ಅಧಿನಿಯಮದ ಯಾವುದೇ ಇತರೆ ಉಪಬಂಧದಲ್ಲಿ ಏನೇ ಒಳಗೊಂಡಿದ್ದರೂ, ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ, 1976ರ ಪ್ರಾರಂಭಕ್ಕೂ ಮೊದಲು ಪ್ರಕರಣ 8ರ (ಎಫ್) ಖಂಡದ ಮೇರೆಗೆ ಸ್ಥಿರೀಕರಿಸಲಾದ ಮತ್ತು ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಸ್ಥಾನಬದ್ಧತಾ ಆದೇಶದ ಮೇರೆಗೆ ಸ್ಥಾನಬದ್ಧತೆಯಲ್ಲಿಟ್ಟ ಪ್ರತಿಯೊಬ್ಬ ವ್ಯಕ್ತಿಯ ಸ್ಥಾನಬದ್ಧತೆಯು, ಆತನ ಸ್ಥಾನಬದ್ಧತೆಯ ದಿನಾಂಕದಿಂದ ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಸದರಿ ಖಂಡದ ಮೇರೆಗೆ ಸಮುಚಿತ ಸರ್ಕಾರದಿಂದ ಆತನ ಸ್ಥಾನಬದ್ಧತೆಯನ್ನು ಮುಂದುವರೆಸಿದ ಹೊರತು, ಅಂಥ ಆದೇಶದ ಮೇರೆಗೆ ಆತನ ಸ್ಥಾನಬದ್ಧತೆಯ ದಿನಾಂಕದಿಂದ ಒಂದು ವರ್ಷದ ಅವಧಿ ಅಥವಾ ನಿರ್ದಿಷ್ಟಪಡಿಸಿದ ಅವಧಿ ಇವುಗಳಲ್ಲಿ ಯಾವುದು ನಂತರ ಮುಕ್ತಾಯಗೊಳ್ಳುವುದೋ ಆ ಅವಧಿಯವರೆಗೆ ಮುಂದುವರೆಯತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದಾವುದೂ, ಯಾವುದೇ ಮುಂಚಿತವಾದ ಸಮಯದಲ್ಲಿ ಅಂಥ ಸ್ಥಾನಬದ್ಧತಾ ಆದೇಶವನ್ನು ರದ್ದುಪಡಿಸಲು ಅಥವಾ ಮಾರ್ಪಾಟು ಮಾಡಲು ಸಮುಚಿತ ಸರ್ಕಾರದ ಅಧಿಕಾರಕ್ಕೆ ಬಾಧಕವಾಗತಕ್ಕದ್ದಲ್ಲ.

(2) ಈ ಅಧಿನಿಯಮದ ಯಾವುದೇ ಇತರೆ ಉಪಬಂಧದಲ್ಲಿ ಏನೇ ಒಳಗೊಂಡಿದ್ದರೂ, ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ, 1976ರ ಪ್ರಾರಂಭಕ್ಕೂ ಮೊದಲು ಪ್ರಕರಣ 9ರ ಉಪಪ್ರಕರಣ (2)ರೊಂದಿಗೆ ಓದಿಕೊಂಡಂತೆ ಪ್ರಕರಣ 8ರ (ಎಫ್) ಖಂಡದ ಮೇರೆಗೆ ಸ್ಥಿರೀಕರಿಸಲಾದಂಥ ಮತ್ತು ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಸ್ಥಾನಬದ್ಧತಾ ಆದೇಶದ ಮೇರೆಗೆ ಸ್ಥಾನಬದ್ಧತೆಯಲ್ಲಿಟ್ಟ ಯಾರೇ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಬಹುದಾದಂಥ ಗರಿಷ್ಠ ಅವಧಿಯು ಸ್ಥಾನಬದ್ಧತೆಯಲ್ಲಿಟ್ಟ ದಿನಾಂಕದಿಂದ ಎರಡು ವರ್ಷಗಳ ಅವಧಿ ಅಥವಾ ನಿರ್ದಿಷ್ಟಪಡಿಸಿದ ಅವಧಿ ಇವುಗಳಲ್ಲಿ ಯಾವುದು ನಂತರ ಮುಕ್ತಾಯಗೊಳ್ಳುವುದೋ ಆ ಅವಧಿಯವರೆಗೆ ಮುಂದುವರೆಸತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದಾವುದೂ, ಯಾವುದೇ ಮುಂಚಿತವಾದ ಸಮಯದಲ್ಲಿ ಅಂಥ ಸ್ಥಾನಬದ್ಧತಾ ಆದೇಶವನ್ನು ರದ್ದುಪಡಿಸಲು ಅಥವಾ ಮಾರ್ಪಾಟು ಮಾಡಲು ಸಮುಚಿತ ಸರ್ಕಾರದ ಅಧಿಕಾರಕ್ಕೆ ಬಾಧಕವಾಗತಕ್ಕದ್ದಲ್ಲ.

**11. ಸ್ಥಾನಬದ್ಧತಾ ಆದೇಶದ ರದ್ದಿಯಾತಿ.–** (1) ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 21ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ ಯಾವುದೇ ಕಾಲದಲ್ಲಿ ಸ್ಥಾನಬದ್ಧತಾ ಆದೇಶವನ್ನು,–

(ಎ) ಆ ಆದೇಶವನ್ನು ರಾಜ್ಯ ಸರ್ಕಾರದ ಒಬ್ಬ ಅಧಿಕಾರಿ ಮಾಡಿದ್ದಾಗ್ಯೂ, ಆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು;

(ಬಿ) ಆ ಆದೇಶವನ್ನು ಕೇಂದ್ರ ಸರ್ಕಾರದ ಒಬ್ಬ ಅಧಿಕಾರಿಯು ಅಥವಾ ರಾಜ್ಯ ಸರ್ಕಾರವು ಮಾಡಿದ್ದಾಗ್ಯೂ, ಕೇಂದ್ರ ಸರ್ಕಾರವು

–ರದ್ದುಪಡಿಸಬಹುದು ಅಥವಾ ಮಾರ್ಪಾಟು ಮಾಡಬಹುದು.

(2) ಸ್ಥಾನಬದ್ಧತಾ ಆದೇಶದ ರದ್ದಿಯಾತಿಯು ಅದೇ ವ್ಯಕ್ತಿಯ ವಿರುದ್ಧ 3ನೇ ಪ್ರಕರಣದ ಮೇರೆಗೆ ಮತ್ತೊಂದು ಸ್ಥಾನಬದ್ಧತಾ ಆದೇಶವನ್ನು ಮಾಡುವುದನ್ನು ಪ್ರತಿಷೇಧಿಸತಕ್ಕದ್ದಲ್ಲ.

**12. ಸ್ಥಾನಬದ್ಧತೆಯಲ್ಲಿನ ವ್ಯಕ್ತಿಗಳ ತಾತ್ಕಾಲಿಕ ಬಿಡುಗಡೆ.–** (1) ಕೇಂದ್ರ ಸರ್ಕಾರವು, ಯಾವುದೇ ಸಮಯದಲ್ಲಿ ಆ ಸರ್ಕಾರವು ಅಥವಾ ಆ ಸರ್ಕಾರದ ಅಧೀನ ಅಧಿಕಾರಿಯು ಅಥವಾ ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದ ಅಧೀನ ಅಧಿಕಾರಿಯು ಮಾಡಿದ ಸ್ಥಾನಬದ್ಧತಾ ಆದೇಶದ ಅನುಸರಣೆಯಲ್ಲಿ ಸ್ಥಾನಬದ್ಧತೆಯಲ್ಲಿಟ್ಟ ಯಾರೇ ವ್ಯಕ್ತಿಯನ್ನು ಷರತ್ತುಗಳಿಲ್ಲದೆ ಅಥವಾ ಆ ವ್ಯಕ್ತಿಯು ಅಂಗೀಕರಿಸುವಂಥ ಆ ನಿರ್ದೇಶನದಲ್ಲಿ ನಿರ್ದಿಷ್ಟ ಪಡಿಸಿದಂಥ ಅಂಥ ಷರತ್ತುಗಳ ಮೇಲೆ ಯಾವುದೇ ನಿರ್ದಿಷ್ಟ ಅವಧಿಯವರೆಗೆ ಬಿಡುಗಡೆ ಮಾಡಬಹುದೆಂದು ನಿರ್ದೇಶಿಸಬಹುದು ಮತ್ತು ಯಾವುದೇ ಸಮಯದಲ್ಲಿ ಅವನ ಬಿಡುಗಡೆಯನ್ನು ರದ್ದುಪಡಿಸಬಹುದು.

(1ಎ) ರಾಜ್ಯ ಸರ್ಕಾರವು, ಯಾವುದೇ ಸಮಯದಲ್ಲಿ ಆ ಸರ್ಕಾರವು ಅಥವಾ ಆ ಸರ್ಕಾರದ ಅಧೀನ ಅಧಿಕಾರಿಯು ಮಾಡಿದ ಸ್ಥಾನಬದ್ಧತಾ ಆದೇಶದ ಅನುಸರಣೆಯಲ್ಲಿ ಸ್ಥಾನಬದ್ಧತೆಯಲ್ಲಿಟ್ಟ ಯಾರೇ ವ್ಯಕ್ತಿಯನ್ನು ಷರತ್ತುಗಳಿಲ್ಲದೆ ಅಥವಾ ಆ ವ್ಯಕ್ತಿಯು ಅಂಗೀಕರಿಸುವಂಥ ಆ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿದಂಥ ಅಂಥ ಷರತ್ತುಗಳ ಮೇಲೆ ಯಾವುದೇ ನಿರ್ದಿಷ್ಟ ಅವಧಿಯವರೆಗೆ ಬಿಡುಗಡೆ ಮಾಡಬಹುದೆಂದು ನಿರ್ದೇಶಿಸಬಹುದು ಮತ್ತು ಯಾವುದೇ ಸಮಯದಲ್ಲಿ ಅವನ ಬಿಡುಗಡೆಯನ್ನು ರದ್ದುಪಡಿಸಬಹುದು.

(2) (1)ನೇ ಉಪಪ್ರಕರಣದ ಅಥವಾ (1ಎ) ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯ ಬಿಡುಗಡೆಯನ್ನು ನಿರ್ದೇಶಿಸುವಲ್ಲಿ ಬಿಡುಗಡೆ ಮಾಡಲು ನಿರ್ದೇಶಿಸುವ ಸರ್ಕಾರವು ಆ ನಿರ್ದೇಶನದಲ್ಲಿ

ನಿರ್ದಿಷ್ಟಪಡಿಸಿರುವ ಷರತ್ತುಗಳನ್ನು ಸರಿಯಾಗಿ ಪಾಲಿಸುವುದಕ್ಕಾಗಿ ಜಾಮೀನುದಾರರೊಂದಿಗೆ ಒಂದು ಬಂಧಪತ್ರವನ್ನು ಬರೆದುಕೊಡಲು ಅವನನ್ನು ಅಗತ್ಯಪಡಿಸಬಹುದು.

(3) (1)ನೇ ಉಪಪ್ರಕರಣದ ಅಥವಾ (1ಎ) ಉಪಪ್ರಕರಣದ ಮೇರೆಗೆ ಬಿಡುಗಡೆಯಾದ ಯಾರೇ ವ್ಯಕ್ತಿಯು ಸಂದರ್ಭಾನುಸಾರ ಅವನ ಬಿಡುಗಡೆಯನ್ನು ಅಥವಾ ಅವನ ಬಿಡುಗಡೆಯನ್ನು ರದ್ದುಪಡಿಸುವುದನ್ನು ನಿರ್ದೇಶಿಸುವ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಕಾಲ ಮತ್ತು ಸ್ಥಳದಲ್ಲಿ ಮತ್ತು ಆ ಪ್ರಾಧಿಕಾರಕ್ಕೆ ತಾನಾಗಿಯೇ ಶರಣಾಗತನಾಗತಕ್ಕದ್ದು.

(4) (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಯಾರೇ ವ್ಯಕ್ತಿಯು ಸಾಕಷ್ಟು ಕಾರಣವಿಲ್ಲದೆ ತಾನಾಗಿಯೇ ಶರಣಾಗತನಾಗಲು ತಪ್ಪಿದರೆ, ಅವನು ಎರಡು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(5) (1)ನೇ ಉಪಪ್ರಕರಣದ ಅಥವಾ (1ಎ) ಉಪ–ಪ್ರಕರಣದ ಮೇರೆಗೆ ಬಿಡುಗಡೆಯಾದ ಯಾರೇ ವ್ಯಕ್ತಿಯು ಸದರಿ ಉಪಪ್ರಕರಣದ ಮೇರೆಗೆ ಅವನಿಗೆ ವಿಧಿಸಿದ ಅಥವಾ ಅವನು ಬರೆದುಕೊಟ್ಟಿರುವ ಬಂಧಪತ್ರದಲ್ಲಿನ ಯಾವುದೇ ಷರತ್ತನ್ನು ಪೂರೈಸಲು ತಪ್ಪಿದರೆ, ಆ ಬಂಧಪತ್ರವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗಿದೆಯೆಂದು ಘೋಷಿಸತಕ್ಕದ್ದು ಮತ್ತು ಅದರ ಮೂಲಕ ಬದ್ಧನಾಗಿರುವ ಯಾರೇ ವ್ಯಕ್ತಿಯು ಅದರ ಬಗ್ಗೆ ದಂಡವನ್ನು ಸಂದಾಯ ಮಾಡಲು ಗುರಿಯಾಗತಕ್ಕದ್ದು.

(6) ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ ಮತ್ತು ಈ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ಯಾವ ವ್ಯಕ್ತಿಯ ವಿರುದ್ಧ ಮಾಡಿದ ಸ್ಥಾನಬದ್ಧತಾ ಆದೇಶವು ಜಾರಿಯಲ್ಲಿರುವುದೋ ಆ ಯಾರೇ ವ್ಯಕ್ತಿಯನ್ನು ಜಾಮೀನಿನ ಮೇಲಾಗಲೀ ಅಥವಾ ಜಾಮೀನು ಬಂಧಪತ್ರದ ಮೇಲಾಗಲೀ ಅಥವಾ ಅನ್ಯಥಾ ಆಗಲಿ ಬಿಡುಗಡೆ ಮಾಡತಕ್ಕದ್ದಲ್ಲ.

**12ಎ. ತುರ್ತು ಪರಿಸ್ಥಿತಿಯೊಡನೆ ವ್ಯವಹರಿಸುವುದಕ್ಕಾಗಿನ ವಿಶೇಷ ಉಪಬಂಧಗಳು.–** ಈ ಅಧಿನಿಯಮ ಅಥವಾ ಸ್ವಭಾವಸಿದ್ಧ ನ್ಯಾಯದ ಯಾವುದೇ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಈ ಪ್ರಕರಣದ ಉಪಬಂಧಗಳು 1971ರ ಡಿಸೆಂಬರ್ 3ರಂದು ಸಂವಿಧಾನದ 352ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಹೊರಡಿಸಿದ ತುರ್ತುಪರಿಸ್ಥಿತಿಯ ಉದ್ಘೋಷಣೆಯು ಪ್ರವರ್ತನೆಯಲ್ಲಿರುವ ಅಥವಾ 1975ರ ಜೂನ್ 25ರಂದು ಆ ಖಂಡದ ಮೇರೆಗೆ ಹೊರಡಿಸಿದ ತುರ್ತು ಪರಿಸ್ಥಿತಿಯ ಉದ್ಘೋಷಣೆಯ ಅವಧಿ ಅಥವಾ 1975ರ ಜೂನ್ 25ನೇ ದಿವಸದಿಂದ ಇಪ್ಪತ್ನಾಲ್ಕು ತಿಂಗಳುಗಳ ಅವಧಿ ಇವುಗಳಲ್ಲಿ ಯಾವುದು ಅತಿ ಅಲ್ಪವಾಗಿರುವುದೋ ಆ ಅವಧಿಯಲ್ಲಿ ಪರಿಣಾಮಕಾರಿಯಾಗಿರತಕ್ಕದ್ದು.

(2) ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ, 1975 (1975ರ 35) ಇದರ ಪ್ರಾರಂಭದ ತರುವಾಯ ಯಾರೇ ವ್ಯಕ್ತಿಯ ವಿರುದ್ಧ ಈ ಅಧಿನಿಯಮದ ಮೇರೆಗೆ ಸ್ಥಾನಬದ್ಧತಾ ಆದೇಶವನ್ನು ಮಾಡುವಾಗ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ ಸ್ಥಾನಬದ್ಧತಾ ಆದೇಶವನ್ನು ಮಾಡುವ ಅಧಿಕಾರಿಯು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವ ತುರ್ತು ಪರಿಸ್ಥಿತಿಗೆ ಸಂಬಂಧಿಸಿದಂತೆ ಉದ್ಘೋಷಣೆಗಳನ್ನು ಹೊರಡಿಸಲಾಗಿದೆಯೋ, ಆ ತುರ್ತು ಪರಿಸ್ಥಿತಿಯೊಂದಿಗೆ (ಈ ಉಪಪ್ರಕರಣದಲ್ಲಿ ಇಲ್ಲಿ ಇನ್ನು ಮುಂದೆ ತುರ್ತು ಪರಿಸ್ಥಿತಿ ಎಂದು ಉಲ್ಲೇಖಿಸಲಾಗಿದೆ) ಪರಿಣಾಮಕಾರಿಯಾಗಿ ವ್ಯವಹರಿಸುವುದಕ್ಕಾಗಿ ಅಂಥ ವ್ಯಕ್ತಿಯ ಸ್ಥಾನಬದ್ಧತೆಯು ಈ ಅಧಿನಿಯಮ ಮೇರೆಗೆ ಅವಶ್ಯವಾಗಿದೆಯೇ ಹೇಗೆ ಎಂಬುದನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಅಂಥ ಪರ್ಯಾಲೋಚನೆಯ ತರುವಾಯ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ ಅಧಿಕಾರಿಗೆ ತುರ್ತು ಪರಿಸ್ಥಿತಿಯೊಂದಿಗೆ ಪರಿಣಾಮಕಾರಿಯಾಗಿ ವ್ಯವಹರಿಸುವುದಕ್ಕಾಗಿ ಅಂಥ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡುವುದು ಅವಶ್ಯವೆಂದು ಮನದಟ್ಟಾದರೆ, ಆ ಸರ್ಕಾರ ಅಥವಾ ಅಧಿಕಾರಿಯು ಆ ಬಗ್ಗೆ ಒಂದು ಘೋಷಣೆಯನ್ನು ಮಾಡಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಆ ಘೋಷಣೆಯ ಒಂದು ಪ್ರತಿಯನ್ನು ಕಳುಹಿಸಬಹುದು:

ಪರಂತು, ಅಂಥ ಘೋಷಣೆಯನ್ನು ಅಧಿಕಾರಿಯು ಮಾಡಿರುವಲ್ಲಿ ಆ ಘೋಷಣೆಯನ್ನು ಮಾಡಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಸಮುಚಿತ ಸರ್ಕಾರವು ಅದನ್ನು ಪುನರವಲೋಕಿಸತಕ್ಕದ್ದು ಮತ್ತು ಅಂಥ ಘೋಷಣೆಯ ಸದರಿ ಹದಿನೈದು ದಿವಸಗಳ ಅವಧಿಯೊಳಗಾಗಿ ಆ ಸರ್ಕಾರವು ಅಂಥ ಪುನರವಲೋಕನದ ತರುವಾಯ ಅದನ್ನು ಸ್ಥಿರೀಕರಿಸಿದ ಹೊರತು ಅದು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

(3) ತುರ್ತು ಪರಿಸ್ಥಿತಿಯೊಂದಿಗೆ ಪರಿಣಾಮಕಾರಿಯಾಗಿ ವ್ಯವಹರಿಸುವುದಕ್ಕಾಗಿ (2)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಘೋಷಣೆಯನ್ನು ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯ ಸ್ಥಾನಬದ್ಧತೆಯ ಮುಂದುವರಿಯುವುದು ಅವಶ್ಯಕವೋ ಹೇಗೆ ಎಂಬ ಪ್ರಶ್ನೆಯನ್ನು ಅಂಥ ಘೋಷಣೆಯ ದಿನಾಂಕದಿಂದ ನಾಲ್ಕು ತಿಂಗಳೊಳಗೆ ಮತ್ತು ಆ ತರುವಾಯ ನಾಲ್ಕು ತಿಂಗಳುಗಳನ್ನು ಮೀರದ ಮಧ್ಯಂತರಗಳಲ್ಲಿ ಸಮುಚಿತ ಸರ್ಕಾರವು ಮರುಪರ್ಯಾಲೋಚನೆ ಮಾಡತಕ್ಕದ್ದು ಮತ್ತು ಅಂಥ ಮರುಪರ್ಯಾಲೋಚನೆಯನ್ನು ಮಾಡಿದ ಮೇಲೆ ಆ ತುರ್ತುಪರಿಸ್ಥಿತಿಯೊಂದಿಗೆ ಪರಿಣಾಮಕಾರಿಯಾಗಿ

ವ್ಯವಹರಿಸಲು ಆ ವ್ಯಕ್ತಿಯ ಸ್ಥಾನಬದ್ಧತೆಯು ಇನ್ನು ಅವಶ್ಯವಿಲ್ಲವೆಂದು ಆ ಸಮುಚಿತ ಸರ್ಕಾರಕ್ಕೆ ಕಂದುಬಂದರೆ, ಆ ಸರ್ಕಾರವು ಆ ಘೋಷಣೆಯನ್ನು ರದ್ದುಪಡಿಸಬಹುದು.

(4) (2)ನೇ ಅಥವಾ (3)ನೇ ಉಪಪ್ರಕರಣದ ಮೇರೆಗೆ ಯಾವುದೇ ಪರ್ಯಾಲೋಚನೆ, ಪುನರವಲೋಚನ ಅಥವಾ ಮರುಪರ್ಯಾಲೋಚನೆಯನ್ನು ಮಾಡುವಲ್ಲಿ, ಸಮುಚಿತ ಸರ್ಕಾರ ಅಥವಾ ಅಧಿಕಾರಿಯು ಅಂಥ ಸರ್ಕಾರ ಅಥವಾ ಅಧಿಕಾರಿಯು ಅನ್ಯಥಾ ಮಾಡುವುದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿರುವುದಾಗಿ ಪರ್ಯಾಲೋಚಿಸಿದರೆ, ಆ ಸಂಗತಿಯನ್ನು ಬಹಿರಂಗಪಡಿಸದೆ ಅಥವಾ ಸಂಬಂಧಿಸಿದ ವ್ಯಕ್ತಿಗೆ ಮನವಿಯನ್ನು ಸಲ್ಲಿಸಲು ಅವಕಾಶವನ್ನು ಕೊಡದೆ ಅದರ ಅಥವಾ ಅವನ ಬಳಿ ಇರುವ ಮಾಹಿತಿ ಮತ್ತು ವಿಷಯಗಳ ಆಧಾರದ ಮೇಲೆ ಕಾರ್ಯನಿರ್ವಹಿಸಬಹುದು.

(5) (2)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗುವಂಥ ಸ್ಥಾನಬದ್ಧತಾ ಆದೇಶದ ಮೇರೆಗೆ ಸ್ಥಾನಬದ್ಧತೆಯಲ್ಲಿಟ್ಟ ಯಾರೇ ವ್ಯಕ್ತಿಗೆ ಆ ಉಪಪ್ರಕರಣದ ಮೇರೆಗೆ ಅಂಥ ವ್ಯಕ್ತಿಗೆ ಸಂಬಂಧಿಸಿದಂತೆ ಮಾಡಿದ ಘೋಷಣೆಯು ಜಾರಿಯಲ್ಲಿರುವ ಅವಧಿಯಲ್ಲಿ ಯಾವ ಕಾರಣಗಳ ಮೇಲೆ ಆ ಆದೇಶವನ್ನು ಮಾಡಲಾಗಿದೆಯೋ ಆ ಕಾರಣಗಳನ್ನು ಬಹಿರಂಗಪಡಿಸುವುದು ಅಗತ್ಯವಿರತಕ್ಕುದಲ್ಲ ಮತ್ತು ತದನುಸಾರವಾಗಿ ಅಂಥ ಅವಧಿಯನ್ನು 3ನೇ ಪ್ರಕರಣದ (3)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

(6) (2)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ಘೋಷಣೆಯನ್ನು ಮಾಡಲಾಗಿರುವ ವ್ಯಕ್ತಿಯಾಗಿದ್ದು, ಆ ಉಪಬಂಧಗಳು ಅನ್ವಯವಾಗುವ ಸ್ಥಾನಬದ್ಧತಾ ಆದೇಶದ ಮೇರೆಗೆ ಸ್ಥಾನಬದ್ಧತೆಯಲ್ಲಿಟ್ಟಿರುವ ಪ್ರತಿಯೊಬ್ಬ ವ್ಯಕ್ತಿಯ ಸಂದರ್ಭದಲ್ಲಿ ಅಂಥ ಘೋಷಣೆಯು ಜಾರಿಯಲ್ಲಿರುವಂಥ ಅವಧಿಯನ್ನು,–

(i) 8ನೇ ಪ್ರಕರಣದ (ಬಿ) ಮತ್ತು (ಸಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅವಧಿಗಳನ್ನು;

(ii) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ "ಒಂದು ವರ್ಷ" ಮತ್ತು "ಐದು ವಾರಗಳ" ಅವಧಿಗಳನ್ನು (2) (ಐ) ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ "ಒಂದು ವರ್ಷ" ಅವಧಿಯನ್ನು ಮತ್ತು 9ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ "ಆರು ತಿಂಗಳು" ಅವಧಿಯನ್ನು

– ಲೆಕ್ಕ ಹಾಕುವ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**13. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರ

ಅಥವಾ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**14. ನಿರಸನ.–** ಆಂತರಿಕ ಭದ್ರತಾ ನಿರ್ವಹಣಾ (ತಿದ್ದುಪಡಿ) ಅಧ್ಯಾದೇಶ, 1974 (1974ರ 11) ಇದು, ಈ ಅಧಿನಿಯಮವು ಪ್ರಾರಂಭವಾದ ಮೇಲೆ ನಿರಸನಗೊಳ್ಳತಕ್ಕದ್ದು ಮತ್ತು ತದನುಸಾರವಾಗಿ ಆಂತರಿಕ ಭದ್ರತಾ ನಿರ್ವಹಣಾ ಅಧಿನಿಯಮ, 1971 (1971ರ 20) ಇದರಲ್ಲಿ ಸದರಿ ಅಧ್ಯಾದೇಶದ ಮೂಲಕ ಮಾಡಿದ ತಿದ್ದುಪಡಿಗಳು ಅಂಥ ಪ್ರಾರಂಭದ ತರುವಾಯ ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.